ಸಾಕ್ಷಿಯನ್ನು ದಿಃ 11.08.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**ಮಧ್ಯಂತರ ಅರ್ಜಿ 1 ರಿಂದ 3 ರ ಮೇಲಿನ ಮುಖ್ಯ ವಿಚಾರಣೆ ಃ ಅರ್ಜಿದಾರರ ಪರ ವಕೀಲರಿಂದ ಃ**

ನಾನು ಈ ದಿನ ನ್ಯಾಯಾಲಯಕ್ಕೆ ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸುತ್ತಿದ್ದು, ಅದರಲ್ಲಿ ಬರೆದ ಸಂಗತಿಗಳು ಎಲ್ಲಾ ಸತ್ಯವಾಗಿದ್ದು, ಅದಕ್ಕೆ ನಾನು ಸಹಿ ಮಾಡಿರುತ್ತೇನೆ. ನಾನು ನನ್ನ ಸಾಕ್ಷಿಯಲ್ಲಿ ಈ ಕೆಳಕಂಡ ದಾಖಲೆಗಳನ್ನು ನ್ಯಾಯಾಲಯದ ಮುಂದೆ ಸಲ್ಲಿಸುತ್ತಿದ್ದೇನೆ.

| | |
|---|---|
| ನಿಪಿ 1 : | ಶಾಂತಮ್ಮ ಎನ್.ಕೆ ರವರ ಮರಣ ಪ್ರಮಾಣ ಪತ್ರ |
| ನಿಪಿ 2 : | ಪುಟ್ಟಸ್ವಾಮಿ ಎಂ.ಸಿ ರವರ ಮರಣ ಪ್ರಮಾಣ ಪತ್ರ |
| ನಿಪಿ 3 : | ಮೃತರ ಕುಟುಂಬದ ಜೀವಂತ ಸದಸ್ಯರ ಧೃಡಿಕರಣ ಪತ್ರ |

**ಪಾಟೀ ಸವಾಲುಃ ಎದುರುದಾರರ ಪರ ಡಿಜಿಪಿ ವಕೀಲರಿಂದಃ**

1. ಪುಟ್ಟಸ್ವಾಮಿ.ಎಂ.ಸಿ., ನಮ್ಮ ತಂದೆ. ನಮ್ಮ ತಂದೆ ದಿಃ12.02.1993 ರಲ್ಲಿ ತೀರಿಕೊಂಡಿದ್ದಾರೆ. ಮೃತ ಶಾಂತಮ್ಮ ಎನ್.ಕೆ ನಮ್ಮ ತಾಯಿ. ನಮ್ಮ ತಾಯಿ ದಿಃ12.01.2017 ರಲ್ಲಿ ತೀರಿಕೊಂಡಿದ್ದಾರೆ. ರವಿಶಂಕರ್ ಎನ್ ಪಿ ಮತ್ತು ಎನ್ ಪಿ ಸುರೇಂದ್ರಕುಮಾರ್ ನನ್ನ ಸಹೋದರರು.

2. ಗೋಳೂರು ಗ್ರಾಮದ ಸರ್ವೆ ನಂಬರ್ 26 ರಲ್ಲಿ ಒಟ್ಟು 4 ಎಕರೆ 20 ಗುಂಟೆ ಜಮೀನು ಇದೆ. ಅ ಒಟ್ಟು 4 ಎಕರೆ 20 ಗುಂಟೆ ಜಮೀನು ಭೂ ಸ್ವಾಧೀನವಾಗಿದೆ. ಸ್ವಾಧೀನವಾದ ಈ 4 ಎಕರೆ 20 ಗುಂಟೆ ಜಮೀನಿಗೆ ನಮ್ಮ ತಾಯಿ ಪರಿಹಾರದ ಹಣವನ್ನು ಪಡೆದುಕೊಂಡಿರುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು.**

(ನನ್ನ ಉ ಮೇ ತೆ ನ್ಯಾ ಬೆ ಮಾಡಲಾಯಿತು)

ಓ ಹೇ ಕೇ ಸ ಇ ಎ

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು